ಶ್ರೀ ಸಿ. ಎಂ. ಆರ್ಮುಗಂ.—ಇದು ಬಹಳ ಪ್ರಾಮುಖ್ಯವಾದ ಪ್ರಶ್ನೆ, ನಾನೂ ಮತ್ತು ಮಾನ್ಯ ಆರಕೇರಿಯವರು ಈ ವಿಷಯದ ಬಗ್ಗೆ ಸಹಿ ಮಾಡಿ ಕಳುಹಿಸಿದ್ದೇವೆ. ತಾವು ಇದಕ್ಕೆ ಪ್ರಾಮುಖ್ಯತೆ ಕೊಡಲೇಬೇಕು.

ಅಧ್ಯಕ್ಷರು.—ನಾನು ನಾಳೆ ಇದನ್ನು ಹಾಕಿಸುತ್ತೇನೆ.

[Strike by K.E.B. officials]

ಶ್ರೀ ಯು. ಬಿ. ಬೋರ್ಕರ್.—ಕರ್ನಾಟಕ ಎಲೆಕ್ಟ್ರಿಸಿಟಿ ಬೋರ್ಡಿನ ನೌಕರರು ಸತ್ಯಾಗ್ರಹ ಮಾಡುತ್ತಿದ್ದಾರೆ. ಅದರ ಬಗ್ಗೆ ನಾನು ಸಭೆಯ ಗಮನಕ್ಕೆ ಒಂದೆರಡು ವಿಷಯಗಳನ್ನು ತರುವುದಕ್ಕೆ ಇಷ್ಟಪಡುತ್ತೇನೆ.

ಅಧ್ಯಕ್ಷರು.—ಮಾನ್ಯ ಸದಸ್ಯರು ನನ್ನನ್ನು ಆಮೇಲೆ ಬಂದು ನೋಡಿ. ಸಾಮಾನ್ಯವಾಗಿ ಸಾರ್ವಜನಿಕ ಹಿತದೃಷ್ಟಿ ಇರತಕ್ಕ ವಿಚಾರಗಳನ್ನು ಇಲ್ಲಿ ತಾವು ಹೇಳಬೇಕು.

CALLING ATTENTION TO MATTERS OF URGENT PUBLIC IMPORTANCE

(*i*) *re : Katha transfer and bifurcation cases referred to the BDA in Bangalore*

ಶ್ರೀ ಟಿ. ಆರ್. ಶಾಮಣ್ಣ (ಬಸವನಗುಡಿ).— ಮಾನ್ಯ ಸಭಾಪತಿಗಳೇ, ಖಾತೆಗಳನ್ನು ವರ್ಗಾವಣೆ ಮಾಡುವ ವಿಷಯದಲ್ಲಿ ಪುರಸಭೆಯವರು ಎಲ್ಲಾ ಪ್ರಕರಣಗಳನ್ನು ಬೆಂಗಳೂರು ಪ್ರಾಧಿಕಾರಕ್ಕೆ ಕಳುಹಿಸಿರುವ ಬಗ್ಗೆ ಬೆಂಗಳೂರು ನಗರದ ನಾಗರೀಕರಿಗೆ ಆಗಿರುವ ತೊಂದರೆಯ ಬಗ್ಗೆ ಮಾನ್ಯ ಪೌರಾಡಳಿತ ಸಚಿವರ ಗಮನವನ್ನು ಸೆಳೆಯುತ್ತೇನೆ.

SRI H. C. SRIKANTAIAH (Minister for Municipal Administration).– I wish to make the following statement ;

Khata transfer is made according to the provisions under Section 106 of the City of Bangalore Municipal Corporation Act 1949. Applications for transfer of Khata received after the new Act came into force are disposed off as per provisions under Sec. 114 of the Karnataka Municipal Corporation Act, 1976.

The time allowed for transfer of khata is 7 days and the time allowed for disposal of bifurcation of papers is 30 days. The time limit is being watched closely and for any lapses, severe action is being taken against the concerned officials. This system has shown effective improvements in the disposal of these applications. If applications are complete in all respects, they are disposed of expeditiously. The delay in most of the cases is due to the fact that the parties do not comply with the requirements even though intimation sent to them by the office, With a view to expedite disposal of such cases the powers hitherto exereised by the Commissioner are delegated to the Deputy Commissioner (Revenue).

The bifurcation of the properties either the building or the land are being referred to the Bangalore Development Authority in

accordance with Section 505 of the Karnataka Municipal Corporation Act 1976 and also in accordance with sections 14 and 17 of the Karnataka Town and Country Planning Act of 1961.

A Statement showing the number of khata transfer applications and bifurcations disposed of from 1-4-1978 to 15-7-1978 is detailed below :—

Reference from 1-4-1978 to 15-7-1978.

Opening Balance	Receipts	Total	Disposal	Closing Balance
March 1978 344	808	1152	767	385
April 1978 385	502	887	716	171
May 1978 171	491	662	459	203
June 1978 203	493	696	526	170
1-7-78 to 15-7-1978. 170	223	393	197	196

Total number of khata transfers pending : ... 196

Total number of bifurcation cases being refferred to Bangalore Development Authority. 447

ಕಾನೂನು ಆದಮೇಲೆ ಬಹಳ ಹೆಚ್ಚಿಗೆ ಖಾತಾ ಟ್ರಾನ್ಸ್‌ಫರ್ಸ್ ಮಾಡಬೇಕು, ಟೈಂಲಿಮಿಟ್ ಫಿಕ್ಸ್‌ಮಾಡಿ ಆದಷ್ಟು ಜಾಗ್ರತೆ ಇದನ್ನೆಲ್ಲಾ ಮಾಡುವುದಕ್ಕೆ ಬಿ.ಡಿ.ಎ. ಗೆ ಕಳುಹಿಸಿಕೊಟ್ಟಿದ್ದೇವೆ.

ಶ್ರೀ ಟಿ. ಆರ್. ಶಾಮಣ್ಣ.— ಮಾನ್ಯ ಸಭಾಪತಿಗಳೇ ಈಗ ಮಾನ್ಯ ಮಂತ್ರಿಗಳು ಕೊಟ್ಟಿರತಕ್ಕ ಅಂಕಿಅಂಶಗಳು ಸತ್ಯಕ್ಕೆ ಬಹಳ ದೂರವಾಗಿವೆ. ಅಂಕಿಅಂಶಗಳನ್ನು ಕೊಟ್ಟಿರತಕ್ಕವರು ಬಹಳ ಬುದ್ಧಿವಂತರು, ಕಾಯಿದೆಯನ್ನು ಹೇಗೆ ಬೇಕಾದರೂ ಹಾಗೆ ತಿರುಗಿಸತಕ್ಕ ಶಕ್ತಿಯುಳ್ಳವರು ಮತ್ತು ಪ್ರಭಾವಶಾಲಿಗಳಾದ ಕಮಿಷನರ್ ಅವರನ್ನು ಮಾನ್ಯ ಮಂತ್ರಿಗಳು ಇಟ್ಟುಕೊಂಡಿದ್ದಾರೆ, ಮಾನ್ಯ ಮಂತ್ರಿಗಳು ನಿಜವಾಗಿಯೂ ಬಹಳ ಅದೃಷ್ಟವಂತರೇ, ನಾನು ಮೊದಲನೆಯದಾಗಿ ಹೇಳಬೇಕಾದ ಪಕ್ಷದಲ್ಲಿ ಶ್ರೀಮಾನ್ ಆದಿರಾಜಯ್ಯನವರನ್ನು ನಾನು ಸುಮಾರು ೩೦ ವರ್ಷಗಳಿಂದ ಬಲ್ಲೆ. ಒಂದು ಕಾಲದಲ್ಲಿ ನಾನು ಅವರಿಗೆ ಮಾಸ್ಟರ್ ಆಗಿದ್ದೆ. ಅವರ ವಿರೋಧವಾಗಿ ನಾನು ಎಂದೂ ಮಾತನಾಡಿರಲಿಲ್ಲ ಅವರು ಹೋಗತಕ್ಕ ರೀತಿ ಮಾಡತಕ್ಕ ಕೆಲಸಗಳನ್ನು ನೋಡಿದರೆ, ಅವರನ್ನು ಖಂಡಿತವಾಗಿಯೂ ಸ್ಮಶಾನ ಕಾಯುವುದಕ್ಕೆ ಹಾಕಬೇಕು, ಇವರನ್ನು ಮನುಷ್ಯರ ಕಡೆ ಹಾಕತಕ್ಕುದು ಒಳ್ಳೆಯದಲ್ಲ ಎಂದು ಕಾಣುತ್ತದೆ. ಇಲ್ಲಿರತಕ್ಕ ಕಾಯಿದೆಯಲ್ಲಿ ಖಾತೆ ಮತ್ತು ಬೈಫರ್ಕೇಷನ್ ಎನ್ನುವ ಹೆಸರೇ ಬಂದಿಲ್ಲ. ಸೆಕ್ಷನ್ ೫೦೫ರ ಪ್ರಕಾರ 'Exercise of Powers by a Corporation to be in conformity with the provisions of the Karnataka Town and Country planning Act, 1961:— 'Notwithstanding anything contained in this Act, a Corporation or any officer or other authority required by or under this Act to execrise any power, or perform any function or discharge any duty.

(i) with regard to any matter relating to land use or development as defined in the Explanation to section 14 of the Karnataka Town and country planning Act, 1961 shall exercise such power, or perform such function or discharge such duty with regard to such land use or development plan or where there is no development plan with the concurrence of the Planning Authority'

In section 17 of the Country planning Act, it is stated'.

'17–Sanction for sub-division of plot or lay-out of Private street-(1) Every person who intends to sub-divide his plot or make or lay-out a private street on or after the date of the publication of the declaration of intension to prepare the Outlise Development Plan under sub-section (1) of section 10, shall submit the lay-out plan together with the prescribed particulars to the Planing Authority for sanction'.

೧೦–೩೦ ಎ.ಎಂ.

ಇಲ್ಲಿ ಕೊಟ್ಟಿರತಕ್ಕ ಪ್ರಕಾರ ಪ್ಲಾಟ್ ಬಗ್ಗೆಯಾಗಲೀ, ಲೇಔಟ್ ಬಗ್ಗೆಯಾಗಲೀ, ಡೆವಲಪ್‌ಮೆಂಟ್ ಬಗ್ಗೆಯಾಗಲೀ ಯಾವುದಕ್ಕೂ ಸಂಬಂಧಪಡುವುದಿಲ್ಲ ಇದು ಬಿಲ್ಡಿಂಗಿಗೆ ಸಂಬಂಧಪಟ್ಟದ್ದು. ಎರಡು ಮುಖ್ಯವಾದ ವಿಚಾರಗಳೇನೆಂದರೆ, ಲೇಔಟ್ ಆಗಬೇಕಾದರೆ ಮತ್ತು ಲ್ಯಾಂಡ್ ಬದಲಾವಣೆ ಆಗಬೇಕಾದರೆ ಮಾತ್ರ ಈ ಆಕ್ಟ್ ಪ್ರಕಾರ ಬಿ.ಡಿ.ಎ.ಗೆ ರೆಫರ್ ಮಾಡಬೇಕಾಗುತ್ತದೆಯೇ ವಿನಹ ಇದು ಸಾವಿರಾರು ಜನ ಸಾರ್ವಜನಿಕರಿಗೆ ಖಂಡಿತ ಅನ್ವಯಿಸುವುದಿಲ್ಲವೆಂದು ನನಗನ್ನಿಸುತ್ತದೆ. ಮುಖ್ಯವಾದ ಕೊರತೆ ಇಷ್ಟೆ ಒಂದು ಕಡೆ ಈ ಬೆಂಗಳೂರು ನಗರದಲ್ಲಿ ಸುಮಾರು ೬೫ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದರೂ ಕೂಡ ಅಷ್ಟೇ ಆಕ್ರಮ ಇದೆ. ಹೀಗಿರತಕ್ಕ ಕಾಲದಲ್ಲಿ ಬಿ.ಡಿ.ಎ ನಲ್ಲಿರತಕ್ಕ ವ್ಯವಸ್ಥೆ ಏನಿದೆಯೋ ಅದಕ್ಕಿಂತ ಚೆನ್ನಾಗಿ ಕಾರ್ಪೊರೇಷನ್ನಿನಲ್ಲಿ ಇದೆ ಎಂದರೆ ತಪ್ಪಾಗಲಾರದು. ಇಲ್ಲಿ ಈಗಾಗಲೇ ಹೆಚ್ಚಿನ ರೀತಿಯಲ್ಲಿ ಹಣದ ಪ್ರಭಾವದಿಂದ ಕೆಲಸವಾಗುತ್ತಿರುವುದರಿಂದ. ಸಾವಿರಾರು ಜನರಿಗೆ ಇದರಿಂದ ಆಗುತ್ತಿರುವ ಕಷ್ಟವನ್ನು ತಡೆಯುವುದು ಕಷ್ಟವಾಗಿದೆ. ಲ್ಯಾಂಡಿಗೆ ಸಂಬಂಧಿಸಿದ್ದೋ ಹೊಸ ಲೇಔಟಿಗೆ ಸಂಬಂದಿಸಿದ್ದೋ ಅಥವಾ ಪ್ಲಾಟಿಗೆ ಸಂಬಂಧಿಸಿದ್ದೋ ಆದರೆ ಅಂಥ ಸಂಧರ್ಭದಲ್ಲಿ ಬಿ.ಡಿ.ಎ.ಗೆ ಹೋಗ ಬೇಕೆ ವಿನಹ ಅಣ್ಣತಮ್ಮಂದಿರು ಕಟ್ಟಡವನ್ನು ಬದಲಾವಣೆ ಮಾಡದೆ ಮನೆ ಹಂಚಿಕೊಳ್ಳುವುದಕ್ಕೆ ಯಾವ ವಿಧವಾದ ತೊಡಕು ಇಲ್ಲವೆಂದು ನನಗನ್ನಿಸುತ್ತದೆ. ಟೌನ್ ಪ್ಲಾನಿಂಗ್ ಆಕ್ಟ್ ಬಂದು ೧೬–೧೭ ವರ್ಷವಾಯಿತು, ಆಗಿನಿಂದ ಈ ಕೆಲಸ ಚೆನ್ನಾಗಿ ನಡೆಯುತ್ತಿದೆ, ಆದರೆ ಈಗ ಏಕೆ ಈ ರೀತಿ ಆಯಿತೆಂದು ಕೇಳುತ್ತೇನೆ. ಇವತ್ತಿನ ದಿವಸ ಬೆಂಗಳೂರಿನಲ್ಲಿ ನೂರಾರು ಸ್ಲಂಗಳು ಬೆಳೆಯುತ್ತಿವೆ, ಆ ಕಡೆ ಏಕೆ ತಮ್ಮ ಗಮನ ಹೋಗಲಿಲ್ಲ? ಬೆಂಗಳೂರು ನಗರದಲ್ಲಿ ಸಂಪಾರು ೨೦ ವರ್ಷಗಳಿಂದ ಸುಮಾರು ೨೦ ಸಾವಿರ ಮನೆಗಳು ಅನಧಿಕೃತವಾಗಿ ಕಟ್ಟಲ್ಪಟ್ಟಿವೆ, ಈ ಬಗ್ಗೆ ಸರ್ಕಾರ ದವರು ಹೆಚ್ಚಿನ ಗಮನ ಹರಿಸಬೇಕೇ ವಿನಹ ಖಾತೆಗೆ. ಹಂಚಿಕೆಗೆ ಅಡ್ಡಿ ಮಾಡುವುದು ಸೂಕ್ತವಲ್ಲ. ಆದ್ದರಿಂದ ದಯವಿಟ್ಟು ಹಿಂದಿನಿಂದ ಯಾವ ರೀತಿ ನಡೆದುಕೊಂಡು ಬಂದಿದೆಯೋ ಅದನ್ನೇ ಮುಂದು ವರಿಸಿಕೊಂಡು ಹೋಗಬೇಕೆಂದು ಹೇಳುತ್ತೇನೆ. ಬೇಕಾದರೆ ಆಕ್ಟನ್ನು ಬದಲಾವಣೆ ಮಾಡಬಹುದೇ ವಿನಹ ಜನರನ್ನು ಹುಲಿ ಬಾಯಿಗೆ ಹಾಕುವುದು ಸರಿಯಲ್ಲ. ನೀವೇನಾದರೂ ನಿಮ್ಮದನ್ನೇ ಮುಂದು ವರಿಸಿಕೊಂಡು ಹೋದಿರೆಂದರೆ ನಿಮಗೆ ಖಂಡಿತ ಮರ್ಯಾದೆ ಬರುವುದಿಲ್ಲ, ಜನ ಬಯ್ಯುತ್ತಾರೆ. ಮತ್ತು ನಾವು ಅದನ್ನು ಖಂಡಿತವಾಗಿ ನಡೆಯುವುದಕ್ಕೆ ಬಿಡುವುದಿಲ್ಲ. ಆ ಅಧಿಕಾರಿಗಳಿಗೆ ರಿಟೈರ್‌ಮೆಂಟ್ ಬೆನಿಫಿಟ್ ಕೊಟ್ಟು ಅಂಥವರ ಕೈಗೆ ಅಧಿಕಾರವನ್ನು ಕೊಟ್ಟು ಜನಗಳನ್ನು ದಯವಿಟ್ಟು ಕಷ್ಟಕ್ಕೆ ಸಿಕ್ಕಿಸ ಬೇಡಿ ಎಂದು ಹೇಳುತ್ತೇನೆ. ತಮ್ಮ ಹೇಳಿಕೆಯಂತೂ ಸತ್ಯಕ್ಕೆ ದೂರವಾದುದು. ಜನತೆಗೆ ಅನುಕೂಲ ಮಾಡಿಕೊಡಬೇಕೆಂಬ ಉದ್ದೇಶವಿದ್ದರೆ ಈ ಬದಲಾವಣೆಗೆ ಅವಕಾಶಕೊಡಕೂಡದೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಪಿ. ರಾಮದೇವ್.—ಮಾನ್ಯ ಮಂತ್ರಿಗಳು ಏನು ಒಂದು ಸ್ಟೇಟ್‌ಮೆಂಟನ್ನು ಓದಿದ್ದಾರೆ ಅದು ಅವರು ಮಾಡಿದ ಸ್ಟೇಟ್‌ಮೆಂಟ್ ಅಲ್ಲ ಅದನ್ನು ಅವರ ಅಧಿಕಾರಿಗಳು ಬರೆದುಕೊಟ್ಟಿದ್ದಾರೆಂದು ನನಗನ್ನಿಸುತ್ತದೆ. ಈ ಗಮನ ಸೆಳೆಯುವ ಸೂಚನೆಯನ್ನು ಏಕೆ ಸರ್ಕಾರದ ಗಮನಕ್ಕೆ ತರುತ್ತಿದ್ದೇವೆಂದರೆ ಜನರ ತೊಂದರೆಯನ್ನು ನಿವಾರಿಸಿ ಎಂದು ಆದರೆ ಇಲ್ಲಿ ಏನಾಗಿದೆ ಎಂದರೆ, ಈ ಅಧಿಕಾರಿಗಳು ತಮ್ಮ ನಿಲುವನ್ನು, ತಮ್ಮ ಬಾಯಿಯಲ್ಲಿಯೂ ಹೇಳಿಸಿದ್ದಾರೆ.

ಅಧ್ಯಕ್ಷರು.—ಕಾರ್ಯದರ್ಶಿಯವರು ಮಾಹಿತಿಯನ್ನು ಕೊಡದೆ ಅವರೇ ಹೇಗೆ ಹೇಳುವುದಕ್ಕೆ ಸಾಧ್ಯವಾಗುತ್ತದೆ? ದಯವಿಟ್ಟು ಆವರ ಹೇಳಿಕೆ ಮೇಲೆ ವಿವರಣೆ ಕೇಳಿ.

ಶ್ರೀ ಪಿ. ರಾಮದೇವ್.—೧೯೬೧ರಲ್ಲಿ ಏನು ಒಂದು ಆಕ್ಟ್ ಆಯಿತೋ, ಆ ಪ್ರಕಾರ ಅವತ್ತಿನಿಂದ ಹಿಡಿದು ಇವತ್ತಿನವರೆಗೆ ಲೇಔಟನ್ನು ಬಿಟ್ಟು ಉಳಿದೆಲ್ಲ ಬೈಫರ್ಕೇಷನ್ನನ್ನು ಕಾರ್ಪೊರೆಷನ್ನಿನಲ್ಲಿ ಮಾಡುತ್ತಿದ್ದಾರೆ. ಲೇಔಟಿಗೆ ಬೇರೆ ಡೆಫಿನಿಷನ್ ಇದೆ. ಆ ಆಕ್ಟ್ ಪ್ರಕಾರ ಇದುವರೆಗೆ ಹೇಗೆ ನಡೆಯುತ್ತಿತ್ತೊ ಅದನ್ನು ಬಿಟ್ಟು ಇದ್ದಕ್ಕಿದ್ದ ಹಾಗೆ ಬಿ.ಡಿ.ಎ.ಗೆ ಕಳುಹಿಸುವುದು ಎಂದರೆ ಯಾವ ನ್ಯಾಯ? ಮಾನ್ಯ ಶಾಮಣ್ಣನವರು ಹೇಳಿದ ಹಾಗೆ, ಮಾನ್ಯ ಆದಿರಾಜಯ್ಯನವರು ಧರ್ಮಸ್ಥಳದ ಜಮೀನಿನ ಸಲುವಾಗಿ ಕಾರ್ಪೊರೇಷನ್ನಿನವರನ್ನು ಬೈಫರ್ಕೇಷನ್ನಿಗೆ ಕೇಳಿದರು. ಆಗ ಅಡ್ಮಿನಿಸ್ಟ್ರೇಟರು ಇದು ಲೇಔಟಿಗೆ ಸಂಬಂಧಪಟ್ಟದ್ದಾದ್ದರಿಂದ ಕೊಡುವುದಕ್ಕಾಗುವುದಿಲ್ಲವೆಂದು ಬರೆದುಕೊಟ್ಟರು. ಆದಕ್ಕೆ, ಅವರು ನಾನು, ಕೇಳಿದಾಗ ಬೈಫರ್ಕೇಷನ್ ಕೊಟ್ಟಿಲ್ಲವಾದ್ದರಿಂದ ಈ ರೀತಿಯ ಬೈಫರ್ಕೇಷನ್ ಮಾಡುವುದಕ್ಕೆ ಕಾರ್ಪೊರೇಷನ್ನಿಗೆ ಅಧಿಕಾರವಿಲ್ಲವೆಂದು ಆ ಅಧಿಕಾರವನ್ನು ಬಿ.ಡಿ.ಎ.ಗೆ ವಹಿಸಿಕೊಡಲಾಯಿತು. ಒಟ್ಟಿನಲ್ಲಿ ಮಾನ್ಯ ಶಾಮಣ್ಣನವರು ಹೇಳಿದ್ದನ್ನು ನಾನು ಸಮರ್ಥನೆ ಮಾಡುತ್ತೇನೆ. ಬೈಫರ್ಕೇಷನ್ ಮತ್ತು ಖಾತಾ ಟ್ರಾನ್ಸ್‌ಫರ್ ಮಾಡುವ ಅಧಿಕಾರವನ್ನು ಕಾರ್ಪೊರೇಷನ್ನಿಗೆ ಕೊಡಬೇಕೆಂದು ಹೇಳುತ್ತೇನೆ. ಕಾರ್ಪೊರೇಷನ್ ಮತ್ತು ಟೌನ್ ಪ್ಲಾನಿಂಗ್ ಆಕ್ಟ್‌ಗಳಲ್ಲಿ ಏನಿದೆ ಅದೇ ರೀತಿ ಮಾಡಬೇಕೆಂದು ಒತ್ತಾಯಿಸುತ್ತೇನೆ.

ಶ್ರೀ ಸಿ.ಎಂ. ಇಬ್ರಾಹಿಂ.—ತಾವು ೧-೪-೭೮ ರಿಂದ ೧೫-೭-೭೮ರವರೆಗೆ ಏನು ಅಂಕಿ ಸಂಖ್ಯೆಗಳನ್ನು ಕೊಟ್ಟಿದ್ದೀರಿ ಅದನ್ನು ನೋಡಿದರೆ ಬಹಳ ಕಡಿಮೆ ಎನ್ನಿಸುತ್ತದೆ. ಇನ್ನೂ ಬಿ.ಡಿ ಎ ನಲ್ಲಿ ೪೦೦ ಚಿಲ್ಲರೆ ಅರ್ಜಿಗಳಿವೆ. ಕಾರ್ಪೊರೇಷನ್‌ನಲ್ಲೂ ಕೂಡ ರೆಫರ್ ಆಗಬೇಕಾದುದು ಸಾಕಷ್ಟು ಇದೆ. ಕಾರ್ಪೊರೇಷನ್ನಿನವರೇ ಖಾತಾ ಛೇಂಜ್ ಮಾಡುತ್ತಿದ್ದರೆ ಸರ್ಕಾರಕ್ಕೆ ಏನು ಲುಕ್ಷಾನು ಆಗುತ್ತಿತ್ತು ಮತ್ತು ಈಗ ಆ ಕೆಲಸವನ್ನು ಬಿ.ಡಿ.ಎ.ಗೆ ವಹಿಸಿರುವುದರಿಂದ ಏನು ಲಾಭ ಬರುತ್ತಿದೆ ಎಂದು ಕೇಳುತ್ತೇನೆ. ಇದರಿಂದ ಜನರಿಗೆ ಹೆಚ್ಚು ತೊಂದರೆಯಾಗುತ್ತಿದೆಯೇ ವಿನಹ ಸರ್ಕಾರಕ್ಕೆ ಏನೂ ಪಾಯಿದೆ ಇಲ್ಲವೆಂದು ಸ್ಪಷ್ಟವಾಗಿ ಹೇಳುತ್ತೇನೆ. ಕಾರ್ಪೊರೇಷನ್ನಿನವರೇ ಖಾತೆಯನ್ನು ಛೇಂಜ್ ಮಾಡುತ್ತಿದ್ದರೆ ನಿಮಗೆ ಏನೂ ಲುಕ್ಷಾನು ಆಗುತ್ತಿರಲಿಲ್ಲ. ಪ್ರಾಮಾಣಿಕವಾಗಿ ಕೆಲಸ ಮಾಡುತ್ತಿದ್ದರೇ ಇಲ್ಲವೇ ಎಂಬುದನ್ನು ನೋಡಬೇಕಾಗಿತ್ತು. ಅರ್ಜಿಸಲ್ಲಿಸಿದ ೩೦ ದಿವಸದಲ್ಲಿ ಕ್ಲೀಯರ್ ಮಾಡುತ್ತೇವೆಂದು ಹೇಳಿದ್ದರೂ ಕೂಡ ೩-೪ ತಿಂಗಳುಗಳಿಂದ ಆ ಅರ್ಜಿಗಳು ಪೆಂಡಿಂಗ್‌ನಲ್ಲಿ ಬಿದ್ದಿವೆ. ಅವರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಎಂ. ಚಂದ್ರಶೇಖರ್.—ನಾವು ಕಾನೂನು ಮಾಡುವುದು ಸಾಧ್ಯವಾದಷ್ಟು ರೀತಿಯಲ್ಲಿ ಜನಗಳಿಗೆ ಉಪಯೋಗವಾಗಲಿ ಎಂದು ಇದುವರೆಗೆ ಖಾತಾ ಟ್ರಾನ್ಸ್‌ಫರ್ ಮತ್ತು ಬೈಫರ್ಕೇಷನ್ ಮಾಡುವ ಅಧಿಕಾರವನ್ನು ಏನು ಕಾರ್ಪೊರೇಷನ್ ಹೊಂದಿತ್ತೊ ಅದನ್ನು ಈಗ ಬಿ.ಡಿ.ಎ.ಗೆ ವಹಿಸಿರುವುದು ಸರಿಯಲ್ಲವೆಂದು ಹೇಳುತ್ತೇನೆ. ಏಕೆಂದರೆ, ಕಾರ್ಪೊರೇಷನ್ ಅಧಿಕಾರಿಗಳೊಡನೆ ಪ್ರತಿನಿತ್ಯ ಜನಸಂಪರ್ಕ ಅಧಿಕವಾಗಿರುವುದರಿಂದ ಅವರಿಗೆ ಆ ಜನಗಳ ಕಷ್ಟಸುಖಗಳು ಚನ್ನಾಗಿ ಗೊತ್ತಿರುವುದರಿಂದ ಕೆಲಸಗಳೂ ಕೂಡ ಸರಿಯಾಗಿ ಮತ್ತು ಜಾಗ್ರತೆಯಾಗಿ ಆಗುತ್ತವೆ. ಆದರೆ ಈ ಬಿ.ಡಿ.ಎ. ಒಡನೆ, ಪ್ರತಿನಿತ್ಯ ಜನಸಂಪರ್ಕ ಇರುವುದಿಲ್ಲ. ಅಲ್ಲಿ ಬೈಫರ್ಕೇಷನ್ನಿಗೆ ಒಂದು ಕಡೆ, ಖಾತಾ ಟ್ರಾನ್ಸ್‌ಫರ್‌ಗೆ ಇನ್ನೊಂದು ಕಡೆ, ಪ್ಲಾನ್ ಸ್ಯಾಂಕ್ಷನ್‌ಗೆ ಮತ್ತೊಂದು ಕಡೆ ಎಂದು ಹೀಗೆ ನಾನಾ ಕಡೆ ಅಲೆಸಿ ಅಲೆಸಿ ಜನರಿಗೆ ತುಂಬ ತೊಂದರೆ ಕೊಡುತ್ತಿದ್ದಾರೆ. ಆದ್ದರಿಂದ ಹಿಂದೆ ಯಾವರೀತಿ ಕಾರ್ಪೊರೇಷನ್ನಿನಲ್ಲಿ ಬೈಫರ್ಕೇಷನ ಮತ್ತು ಖಾತಾ ಟ್ರಾನ್ಸ್‌ಫರನ್ನು ಮಾಡುತ್ತಿದ್ದರೋ ಅದೇ ರೀತಿ ಮುಂದೆಯೂ ಕೂಡ ಅಲ್ಲೇ ಈ ಕೆಲಸವನ್ನು ಮಾಡುವುದಕ್ಕೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

SRI A. LAKSHMISAGAR.—I want to know from thd Hon. Minister, if there is a provision either under the Karnataka Municipal Corporetions Act of 1976 or under Karnataka Town and Country Planning Act or under the Bangalore Development Authority Act of 1976, which envisages Khata transfer and bifurcation of plots? If so, how do you meet the situation now raised in the call attention motion?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ.—ಈ ಖಾತಾ ಬದಲಾವಣೆ ಹಾಗೂ ಬೈಫರ್ಕೇಷನ್ ಬಗ್ಗೆ ಮಾನ್ಯ ಶಾಮಣ್ಣನವರು ಗಮನ ಸೆಳೆಯುವ ಸೂಚನೆಯನ್ನು ಕಳುಹಿಸಿ ಕೆಲವು ಸಮಸ್ಯೆಗಳನ್ನು ಎತ್ತಿದ್ದಾರೆ. ಅಧಿಕಾರಿಗಳ ಬಗ್ಗೆ ಕೆಲವು ದೋಷಾರೋಪಣೆಗಳನ್ನೂ ಕೂಡ ಮಾಡಿದ್ದಾರೆ. ಯಾವುದೇ ಅಧಿಕಾರಿಗಳಿದ್ದರೂ ಇದನ್ನು ಕಾನೂನಿನ ವ್ಯಾಪ್ತಿಗೆ ಒಳಪಟ್ಟು ಮಾಡಿದ್ದಾರೆ. ಸನ್ಮಾನ್ಯ ಟಿ. ಆರ್ ಶಾಮಣ್ಣನವರು ೧೯೭೬ರಲ್ಲಿ ಈ ಆಕ್ಟ್ ಅಮೆಂಡ್ ಆದಾಗ ಜಾಯಿಂಟ್ ಸೆಲೆಕ್ಟ್ ಕಮಿಟಿ ಸದಸ್ಯರಾಗಿದ್ದರು ಎಂದು ಕಾಣುತ್ತೆ. ನನಗೆ ಸರಿಯಾಗಿ ಜ್ಞಾಪಕವಿಲ್ಲ, ಅವರಿಗೂ ಗೊತ್ತಿದೆ. ಈಗ ಖಾತಾ ಟ್ರಾನ್ಸ್‌ಫರ್‌ಗಳನ್ನು ಬಿ.ಡಿ.ಎ ನವರು ಮಾಡಬೇಕು, ಇದನ್ನು ನಾವು ದುರುದ್ದೇಶದಿಂದ ಮಾಡಿಲ್ಲ. ಈಗ ಮತ್ತೆ ಕಾನೂನಿನ ತಿದ್ದುಪಡಿಯಾಗದೇ ಕಾರ್ಪೊರೇಷನ್ ಆ ಕೆಲಸ ಮಾಡುವುದಕ್ಕೆ ಕಷ್ಟವಾಗುತ್ತದೆ. ಇದಕ್ಕೆ ಮೊದಲು ತಿದ್ದುಪಡಿ ಆಗಬೇಕು. ಹಿಂದೆ ತಾವೇ ಈ ಮನೆಯಲ್ಲಿ ತಿದ್ದುಪಡಿಗಳನ್ನು ಮಾಡಿದ್ದೀರಿ. ಅದರ ಪ್ರಕಾರ ಕಾನೂನುಗಳನ್ನು ಮಾಡಲಾಗಿದೆ. ಇದರಲ್ಲಿ ಯಾವ ತರಹದ ಅನ್ಯಾಯವೂ ಆಗಲ್ಲ. ಇದರಿಂದ ಕೆಲವು ತೊಂದರೆಗಳಾಗುತ್ತಿವೆ ಎಂಬುದು ಸರ್ಕಾರದ ಗಮನಕ್ಕೆ ಈಗ ಬಂದಿದೆ. ಈಗ ಮಾನ್ಯ ಶಾಮಣ್ಣನವರು ಕಾರ್ಪೊರೇಷನ್‌ಗೆ ಮತ್ತೆ ಬಿ.ಡಿ.ಎ.ಗೆ ಎರಡು ಕಡೆಯೂ ಓಡಾಡಬೇಕು, ತೊಂದರೆಯಾಗುತ್ತದೆ ಎಂದು ಹೇಳಿದ್ದಾರೆ. ಮಾನ್ಯ ಸದಸ್ಯರುಗಳು ಕೆಲಸ ಜರೂರಾಗಿ ಆಗುವುದಕ್ಕೆ ಸರ್ಕಾರ ಯಾವ ರೀತಿ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು ಎಂಬ ಬಗ್ಗೆ ಸಲಹೆಗಳನ್ನು ಕೊಡಬಹುದು. ಈ ಕೆಲಸ ತೊಂದರೆಯಾಗದ ರೀತಿಯಲ್ಲಿ ಅನುಕೂಲಕರವಾಗಿ ಕೆಲಸವಾಗುವಂತೆ ಮಾಡಲು ಏನಾದರೂ ಸಲಹೆಗಳನ್ನು ತೆಗೆದುಕೊಂಡು ನಾವು ಸೂಕ್ತ ಕಾರ್ಯಕ್ರಮ ಕೈಗೊಳ್ಳಬೇಕು.

ಶ್ರೀ ಎ. ಲಕ್ಷ್ಮೀಸಾಗರ್ ಖಾತಾ ಟ್ರಾನ್ಸ್‌ಫರ್ ಮಾಡುವುದಕ್ಕೆ ಈ ಮೂರು ಆಕ್ಟ್‌ಗಳಲ್ಲಿ ಪ್ರಾವಿಷನ್ ಯಾವುದರಲ್ಲಿದೆ ಎಂಬುದನ್ನು ನೋಡಿ. ಈ ಮೂರು ಆಕ್ಟ್‌ಗಳ ಪೈಕಿ ಯಾವುದರಲ್ಲಾದರೂ ಒಂದರಲ್ಲಿ ಇಂಥವರಿಗೆ ಖಾತಾ ಟ್ರಾನ್ಸ್‌ಫರ್‌ಗೆ ಅಧಿಕಾರ ಇದೆ ಎಂಬುದನ್ನು ತೋರಿಸಿ. ತಾವು ಸೆಕ್ಷನ್ ೫೦೫ ಚೆನ್ನಾಗಿ ನಿಧಾನವಾಗಿ ಓದಿ. ಕರ್ನಾಟಕ ಮುನಿಸಿಪಲ್ ಕಾರ್ಪೊರೇಷನ್ ಆಕ್ಟ್ ೧೯೭೬ ಇದನ್ನು ಚೆನ್ನಾಗಿ ನಿಧಾನವಾಗಿ ಓದಿ. ಈ ಆಕ್ಟ್‌ನ್ನು ಪೂರ್ತಿ ಓದಿ ನೋಡಿದರೆ ಮಾನ್ಯ ಮಂತ್ರಿಗಳಿಗೆ ಅರ್ಥವಾಗುತ್ತದೆ. ಕರ್ನಾಟಕ ಮುನಿಸಿಪಲ್ ಕಾರ್ಪೊರೇಷನ್ ಆಕ್ಟ್‌ನಲ್ಲಿ ಏನು ಹೇಳಿದೆ ಎಂದು ನೋಡಿದರೆ, Section 505 of the Karnataka Municipal Corporation Act, 1976: which deals, with the exercise of powers by the Corporation has to be in conformity with the provisions of the Karnataka Town and Country Planning Act, 1961. It means prima facie that the provisions of the Karnataka Town and Country Planning Act should be implemented by the Corporation Authority, *i.e.* implementing authority is the Bangalore City Corporation.

Then, the P.R.O. Bangalore City Corporation has circulated a memo purporting to be issued by the B.D.A. dated nill in which the B.D.A. claims that it is the exculsive authority to look into the matter. The crux of the problem is this. Who has to exercise the powers either under the Corporation Act or the Country or Town Planning Act, or under B.D.A. to effect a Khata transfer? This is the crux of the problem. Please place before the House the correct position.

Secondly, lot of confusion is being created hitherto. The practice was that the City Corporation authority was the authority which was doing this job of effecting transfer and there was no hinderance. Things were moving in a satisfactory manner though there were some complaints now and then. How do you remedy this situation?

Thirdly, when two brothers partition their property is there any law in this country that the brothers should not be partitioned & divide their property and live separately. Under the Transfer of Property Act, if brothers divide their property, they are entitled to live separate and you cannot take away their rights. Now this is the khata transfer which comes in the way. These are the three problems which the Minister has to answer categorically which would be helpful and which would serve the interest of the people for whom all these laws are made. I request the Minister to go into the matter more minutely and come out with a definite and correct answer.

ಶ್ರೀ ಎಚ್.ಸಿ. ಶ್ರೀಕಂಠಯ್ಯ.—ಅಧ್ಯಕ್ಷರೇ ಈಗ ಮಾನ್ಯ ಸದಸ್ಯರಾದ ಲಕ್ಷ್ಮೀಸಾಗರ್ ಅವರು ಏನು ಹೇಳಿದ್ದಾರೆ, ಅದನ್ನು ಪಾಯಿಂಟ್ ಬೈ ಪಾಯಿಂಟ್ ಪರಿಶೀಲನೆ ಮಾಡಿ ಒಟ್ಟಿನಲ್ಲಿ ಜನಗಳಿಗೆ ತೊಂದರೆಯಾಗದಂತೆ ಮಾಡಲು ಸರ್ಕಾರ ಕಾರ್ಯಕ್ರಮ ತೆಗೆದುಕೊಳ್ಳಬೇಕಾಗಿದೆ. ಅದನ್ನು ಖಂಡಿತವಾಗಿ ನಾನು ಮಾಡುತ್ತೇನೆ ಎಂದು ಹೇಳುತ್ತೇನೆ. ಅಲ್ಲದೆ ಮಾನ್ಯ ಟಿ.ಆರ್. ಶಾಮಣ್ಣನವರು ಕೆಲವು ಸಮಸ್ಯೆಗಳನ್ನು ಎತ್ತಿದ್ದಾರೆ. ಎಲ್ಲಾ ಶಾಸಕರನ್ನೂ ಕರೆದು ಈ ಖಾತಾ ಟ್ರಾನ್ಸ್‌ಫರ್ ಬಗ್ಗೆ ಮತ್ತು ಇದರಲ್ಲಿರತಕ್ಕ ನ್ಯೂನತೆಗಳ ಬಗ್ಗೆ, ತೊಂದರೆಗಳ ಬಗ್ಗೆ ಚರ್ಚೆ ಮಾಡಿ ತಕ್ಕ ಕಾರ್ಯಕ್ರಮವನ್ನು ಸರ್ಕಾರ ತೆಗೆದುಕೊಳ್ಳುತ್ತದೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಟಿ.ಆರ್. ಶಾಮಣ್ಣ.—ನಾನು ಯಾವುದೇ ಅಧಿಕಾರಿಗಳ ಮೇಲೆ ಅವರ ಹಾನೆಸ್ಟಿ ಅಥವಾ ಡಿಸ್‌ಹಾನೆಸ್ಟಿ ಬಗ್ಗೆ ಏನೂ ಹೇಳುವುದಿಲ್ಲ. ಜನಗಳಿಗೆ ತೊಂದರೆ ಕೊಡುವುದನ್ನು ತಪ್ಪಿಸಬೇಕು ಎಂದು ಹೇಳುತ್ತಿದ್ದೇನೆ. ಈ ಆಕ್ಟ್‌ನ ಸಕ್ಷನ್ ೧೪ರಲ್ಲಿ ಏನು ಹೇಳುತ್ತದೆಂದರೆ:—

Mysore Town & Country Planning Act 1961. Section 14-says;

(a) the expression "development" means the carrying out of building or other operation in or over or under any land or the making of any material change in the use of any building or other land;

(b) the following operations or uses of land shall not be deemed to involve a development of any building or land, namely;

(i) the carrying out of works for maintenance, improvement or other alteration of any building being works which affect only the interior of the building or which do not materially affect the external appearance of the building;

ಆದ್ದರಿಂದ ಯಾವ ವಿಧವಾದ ಬದಲಾವಣೆಯಾದರೂ ಕೂಡ ಡೆವಲಪ್‌ಮೆಂಟ್ ಎಂಬುದಲ್ಲಿ ಬರುವುದಿಲ್ಲ ಅಣ್ಣತಮ್ಮಂದಿರು ಒಂದು ಮನೆಯ ಮೇಲ್ಭಾಗ ಅಥವಾ ಕೆಳಭಾಗವನ್ನು ಹಂಚಿಕೊಳ್ಳುವುದಕ್ಕೆ ಯಾವ ಅಡ್ಡಿಯೂ ಬರಬಾರದು. ನಾನು ೭ ಜನ ಮಕ್ಕಳಿಗೂ ಎಲ್ಲಾ ಸರಿಯಾಗಿ ಹಂಚಿದ್ದೇನೆ. ಆದರ ಕಷ್ಟಸುಖ ನನಗೆ ಗೊತ್ತಿದೆ. ನಾನು ಹೇಳುವುದೇನೆಂದರೆ ಈಗ ತಿದ್ದುಪಡಿ ತಂದು ಸರಿ ಮಾಡುವ ತನಕ ಹಿಂದೆ ಯಾವರೀತಿ ನಡೆಯುತ್ತಿತ್ತೊ ಅದೇರೀತಿ ಈಗಲೂ ಆಗುವಂತೆ ಅವಕಾಶ ಮಾಡಿಕೊಡಬೇಕು. ಈ ಖಾತಾ ಟ್ರಾನ್ಸ್‌ಫರ್‌ಗಳು ಕಾರ್ಪೊರೇಷನ್‌ನಲ್ಲೇ ಆಗುವಂತೆ ಮಾಡಬೇಕು. ತಾವು ಆದೇಶ ಕೊಟ್ಟರೆ

ಖಾತಾ ಟ್ರಾನ್ಸ್‌ಫರ್‌ಗೆ ಬಂದಿರುವ ಅರ್ಜಿಗಳನ್ನೆಲ್ಲಾ ಕಾಪೊರೇಷನ್‌ಗೆ ಪಾಪಸ್ ಕಳಿಸಿಕೊಡುತ್ತೇವೆ ಎಂದು ಅಧಿಕಾರಿಗಳು ಹೇಳಿದ್ದಾರೆ. ಆದ್ದರಿಂದ ದಯವಿಟ್ಟು ಲೀಗಲ್ಲಾಗಿ ಏನು ಮಾಡಬೇಕೋ ಅದನ್ನು ಎಗ್ಸಾಮಿನ್ ಮಾಡಿ. ಅಲ್ಲಿಯವರೆಗೂ ಹಿಂದೆ ಯಾವ ರೀತಿ ನಡೆಯುತ್ತಿತ್ತೋ ಅದೇರೀತಿ ನಡೆದು ಕೊಂಡುಹೋಗಲಿ. ಆದರಿಂದ ಆಕಾಶ ಏನು ಕಳಚಿ ಬೀಳುವುದಿಲ್ಲ. ನೀವು ಆಕ್ಟ್ ಬದಲಾವಣೆ ಮಾಡ ಬೇಕಾದರೆ ಒಂದು ಗಳಿಗೆಯಲ್ಲಿ ಮಾಡಬಹುದು, ಏಕೆಂದರೆ ನಿಮ್ಮ ಕಡೆ ಕೈ ಎತ್ತುವ ಜನ ಇರುವುದರಿಂದ ಆದಷ್ಟು ಬೇಗ ಮಾಡುವುಕ್ಕೆ ಅನುಕೂಲವಿದೆ. ಆದ್ದರಿಂದ ದಯವಿಟ್ಟು ಈ ಬಗ್ಗೆ ತಕ್ಷಣ ಕಾರ್ಯಕ್ರಮ ತೆಗೆದುಕೊಳ್ಳಿ.

ಶ್ರೀ ಎಚ್.ಸಿ. ಶ್ರೀಕಂಠಯ್ಯ —ನಾನು ಪರಿಶೀಲನೆ ಮಾಡಿಸುತ್ತೇನೆ.

(*ii*) *re: non-implementation of Third Wage Board Recommendation.*

SRI M. MALLIKARJUNA KHARGE (Gurmitkal). - Sir, I call the attention of the Minister for Excise and Labour to non-implementation of III Wage Board recommendations for the Textile Mill Workers.

SRI R.S. PATIL (Minister for Excise & Labour).—Sir, I wish to make the following statement.

No Wage Board was constituted by the State Government for Cotton Textile Industry. However the Government of Karnataka, by their Order No. SWL 34 LMW 74 dated 11th April 1974, constituted a Tripartite Committee for Cotton Textile Industry in the State. After long deliberations the Committee submitted its recommendations on 12th May 1978 and the same was accepted by the Government in their Order No. SWL 15 LMW 77 dated 7th July 1978.

2. Though the recommendations of the committee are effective from 1st January 1978 according to the Government Order the increase in wages as recommended by the committee shall be included and payable in the salary for the month of August, 1978. Hance at this juncture the question of refusal of payment of the salary as rec mmended by the Tripartite Committee does not arise.

3. It is acertained from the management of MSK Mills that a decision to implement the Government Order in this behalf is likely to be taken very shortly which will be applicable to all the NTC Mills in Karnataka.

SRI MALLIKARJUNA KHARGE.—I want to know how many workers are going to benefit from the recommendations of this Tripartite Committee for Cotton Textile Industry in the State ?

SRI R. S. PATIL.—Nearly 50,000 workers.

SRI MALLIKARJUNA KHARGE. —This National Textile Corporation is under the control of the Central Government. I want to know whether they have given any specific assurance that they will implement this Tripartite Committee's recommendations constituted by the State Government ?